# ಮುಷ್ಟಿಬಿಗಿದು ಮುನ್ನಡೆಯುತ್ತಾ...



■ ಸಂಧ್ಯಾರಾಣಿ
ಲೇಖಕಿ



ಟೆನ್ನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಅವರ ಆತ್ಮಚರಿತ್ರೆ ‘Ace Against Odds’ ಬಿಡುಗಡೆಯಾಗಿದ್ದ ಸಮಯ. ಪ್ರಗತಿಪರ ಪತ್ರಕರ್ತ ರಾಜದೀಪ್ ಸರ್ದೇಸಾಯಿ ಅವಳನ್ನು ಸಂದರ್ಶಿಸುತ್ತಿದ್ದರು. ಅವರು ಕೇಳಿದರು: ‘ಸಾನಿಯಾ ಯಾವಾಗ ಸೆಟ್ಲ್ ಆಗೋದು? ಮಗು ಯಾವಾಗ? ಕುಟುಂಬ ಶುರು ಮಾಡೋದು ಯಾವಾಗ?’

ಸಾನಿಯಾ ತಮ್ಮ ಏಸ್ ಹೊಡೆತವನ್ನು ಬಾರಿಸಿದರು: ‘ಯಾಕೋ ನಿಮ್ಮ ದನಿಯಲ್ಲಿ ನಿರಾಸೆ ಕಾಣಿಸುತ್ತಿದೆ. ನಾನು ತಾಯಿ ಆಗುವುದು ಬಿಟ್ಟು ಟೆನ್ನಿಸ್ ಜಗತ್ತಿನಲ್ಲಿ ನಂ. 1 ಆಗಿರುವ ಬಗ್ಗೆ ನಿಮಗೆ ಬೇಸರ ಇದ್ದಂತಿದೆ. ಒಬ್ಬ ಹೆಣ್ಣಾಗಿ ನನಗೆ ಆಗಾಗ ಈ ಪ್ರಶ್ನೆ ಎದುರಾಗುತ್ತಲೇ ಇರುತ್ತದೆ. ಇದು ನಾನೊಬ್ಬಳೇ ಅಲ್ಲ, ಎಲ್ಲಾ ಹೆಂಗಸರೂ ಎದುರಿಸುವ ಪ್ರಶ್ನೆ – ಮೊದಲು ಮದುವೆ, ಆನಂತರ ಮಕ್ಕಳು. ಆಗ ನಾವು ‘ಸೆಟ್ಲ್’ ಆದಂತೆ ಲೆಕ್ಕ. ಅದುವರೆಗೂ ಎಷ್ಟೇ ವಿಂಬಲ್ಡನ್ ಗೆಲ್ಲಲಿ, ಎಷ್ಟು ಸಲ ವಿಶ್ವದ ನಂ. 1 ಆಗಲಿ, ಅದು ಗಣನೆಗೆ ಬರುವುದೇ ಇಲ್ಲ...’

ಸಾನಿಯಾಳಂತಹ ಸಾನಿಯಾಳನ್ನು ರಾಜದೀಪ್‌ನಂತಹ ಪಳಗಿದ ಪತ್ರಕರ್ತ ಸಹ ಇಂತಹ ಪ್ರಶ್ನೆ ಕೇಳಬಹುದಾದರೆ, ಬೇರೆಯವರ ಪಾಡೇನು?

ಕೆಲವು ವರ್ಷಗಳ ಹಿಂದೆ ಬೆಳಗಿನ ಸಮಯ ಹಲವು ನ್ಯೂಸ್ ಚಾನೆಲ್‌ಗಳಲ್ಲಿ ತಪ್ಪದೆ ಕಾಣಿಸಿಕೊಳ್ಳುತ್ತಿದ್ದ ದೃಶ್ಯ, ಕಾವಿಧಾರಿಯೊಬ್ಬರು ಕುಳಿತು ಜಗತ್ತು ಉದ್ಧಾರವಾಗಬೇಕಾದರೆ ಹೆಂಗಸರು ಹೇಗಿರಬೇಕು ಎಂದು ತೌಡು ಕುಟ್ಟುತ್ತಿದ್ದುದು. ಎಷ್ಟುಹೊತ್ತಿಗೆ ಏಳಬೇಕು, ಯಾವ ವಸ್ತ್ರ ಧರಿಸಬೇಕು, ಹೇಗೆ ಮತ್ತು ಎಷ್ಟು ಊಟ ಮಾಡಬೇಕು, ಹಣೆಯ ಕುಂಕುಮ ಎಷ್ಟು ದೊಡ್ಡದಿರಬೇಕು ಎಂದು ಹೇಳುವುದಷ್ಟೇ ಅಲ್ಲ – ಹಾಗಿಲ್ಲದಿದ್ದರೆ ಹೇಗೆ ಜಗತ್ತೇ ಹಾಳಾಗಿಬಿಡುತ್ತದೆ ಎಂದು ಒರಲುತ್ತಾ ನೋಡುವವರೆದೆಯಲ್ಲಿ ಭಯ ಹುಟ್ಟಿಸಲು ಹರಸಾಹಸ ಮಾಡುತ್ತಿದ್ದರು.

ಶೋ ಒಂದರಲ್ಲಿ ಕಾಜೋಲ್‌ರನ್ನು ಅಮಿತಾಭ್ ಸಿಕ್ಕಾಪಟ್ಟೆ ಹೊಗಳಿದ್ದರು. ಅವರ ಹೊಗಳಿಕೆಗೆ ಕಾರಣ, ಆಕೆ ಥೇಟ್ ಜಯಾಬಾಧುರಿ ರೀತಿಯಲ್ಲಿ ಮದುವೆಯ ನಂತರ ವೃತ್ತಿಬದುಕನ್ನು ತಳ್ಳಿ ಸಂಸಾರವನ್ನು ತನ್ನ ಆದ್ಯತೆ ಮಾಡಿಕೊಂಡರು ಎನ್ನುವುದು.

ಮೊನ್ನೆಮೊನ್ನೆ ನಮ್ಮ ಆರೋಗ್ಯ ಸಚಿವರು ‘ನಿಮ್ಹಾನ್ಸ್’ ಸಂಸ್ಥೆ ಹಮ್ಮಿಕೊಂಡಿದ್ದ ಮಾನಸಿಕ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತ, ಆಧುನಿಕ ಮಹಿಳೆಯರು ಮದುವೆಯನ್ನು ನಿರಾಕರಿಸಿ ಒಬ್ಬಂಟಿ ಬದುಕಲು ಇಚ್ಛಿಸುತ್ತಿದ್ದಾರೆ. ಮದುವೆಯಾದರೂ ಮಕ್ಕಳನ್ನು ಹೆರಲು ಹಿಂಜರಿಯುತ್ತಿದ್ದಾರೆ, ಬಾಡಿಗೆ ತಾಯ್ತನದ ಮೊರೆ ಹೋಗುತ್ತಿದ್ದಾರೆ ಎಂದು ಅತ್ಯಂತ ವಿಷಾದದಿಂದ ಅಲವತ್ತುಕೊಂಡಿದ್ದರು. ಇದ್ಯಾವ ಮನಃಸ್ಥಿತಿ?

ಹೆಣ್ಣನ್ನು ತಮ್ಮ ಬಯಕೆಯ, ಉದ್ದೇಶದ, ಯೋಜನೆಗಳ, ಅಜೆಂಡಾಗಳ ಪೂರೈಕೆಗಾಗಿ ಮಾತ್ರ ಇರುವವಳು ಎಂದು ನೋಡುವ ಈ ಮನೋಭಾವದ ನೆಲೆಯಾದರೂ ಯಾವುದು? ಇವರಿಗೆ ಎಂದೂ ಹೆಣ್ಣು ಸಹಯಾತ್ರಿ ಅಲ್ಲ, ಸಹವಾಸಿಯೂ ಅಲ್ಲ. ಅಸಲಿಗೆ ಅವರ ಲೋಕದವಳೇ ಅಲ್ಲ. ಹೆಣ್ಣೆಂದರೆ ಅವರ ಅಗತ್ಯಗಳನ್ನು ಪೂರೈಸುತ್ತಾ, ಅವರ ಜಗತ್ತು ಏನೂ ವ್ಯತ್ಯಯವಾಗದಂತೆ ನೋಡಿಕೊಳ್ಳುತ್ತಿರುವವಳು. ಸಂಪ್ರದಾಯಗಳ ಫಲಾನುಭವಿಗಳು ಗಂಡುಗಳಾದರೂ, ಅದರ ನೊಗ ಇರುವುದು ಮಾತ್ರ ಹೆಣ್ಣುಗಳ ಹೆಗಲಮೇಲೆ. ಜಗಮೆಚ್ಚುವ ‘ಟ್ರೆಡಿಶನಲ್’ ಹೆಣ್ಣುಮಕ್ಕಳೆಂದರೆ ಹೀಗಿರಬೇಕು. ನಮ್ಮೆಲ್ಲಾ ಚಿತ್ರಗೀತೆಗಳೂ ವೈಭವೀಕರಿಸುವುದು ಇಂತಹ ಹೆಣ್ಣು, ತಂಗಿ, ಅಮ್ಮ, ಮಗಳನ್ನೇ. ಹಾಗೆ ಅವರ ಮಾತುಗಳಿಗೆ ತಲೆದೂಗದ ಹೆಣ್ಣುಗಳನ್ನು ಕಂಡರೆ ಅವರಿಗೆ ಹೆದರಿಕೆ,